ಓ.ಎಸ್ ನಂಃ 426/2016

ಪಿ .ಡಬ್ಲ್ಯು-1

ಸಾಕ್ಷಿಯನ್ನು ದಿನಾಂಕಃ 02.11.2023 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು ಃ- ಪ್ರತಿವಾದಿ ಪರ ಶ್ರೀ. ಎನ್ ಎಸ್ ವಕೀಲರಿಂದ**

ಈ ದಾವಾವನ್ನು ಸರ್ವೆ ನಂ 341/2 ರ ಸ್ವತ್ತಿನ ಮೇಲೆ ಹೂಡಿರುತ್ತೇನೆ. ಸದರಿ ಸ್ವತ್ತು 1 ಎಕರೆ 14 ಗುಂಟೆ ಇರುತ್ತದೆ. ಸರ್ವೆ ನಂ 341/2 ರಲ್ಲಿ ಒಟ್ಟು ಎಷ್ಟು ವಿಸೀರ್ಣ ಇರುತ್ತದೆ ಎಂದರೆ ಸಾಕ್ಷಿಯು 6 ಎಕರೆ ಇರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ 341/2 ರಲ್ಲಿ 4 ಎಕರೆ ಜಮೀನು ದಾವಾ ಸ್ವತ್ತಿನ ಉತ್ತರಕ್ಕೆ ಬರುತ್ತದೆ. ಸದರಿ ಸ್ವತ್ತು ನನ್ನ ತಂದೆ ಮಹಮ್ಮದ್ ಅಮಾನುಲ್ಲಾ ರವರು ಗೌಡ ರಿಂದ ಖರೀದಿ ಮಾಡಿರುತ್ತಾರೆ. ಸದರಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಿರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಸರ್ವೆ ನಂ 341/2 ರಲ್ಲಿ ಯಾವುದೇ ಖರಾಬು ಇರುವುದಿಲ್ಲ. ಸರ್ವ ನಂ 341/2 ರ ಸರ್ವೆ ದಾಖಲಾತಿ ಇದೆಯಾ ಎಂದರೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ನಂ 341/1 ರ ಸ್ವತ್ತು ಪ್ರತಿವಾದಿಗೆ ಸೇರಿರುತ್ತದೆ ಎಂದರೆ ಸರಿ. ಪ್ರವಾದಿಗೆ ಸೇರಿದ ಜಮೀನಿನ ಮೇಲೆ ಹಕ್ಕು ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ 341/1 ರ ಸ್ವತ್ತು ದಾವಾ ಸ್ವತ್ತಿನ ಯಾವ ದಿಕ್ಕಿಗೆ ಬರುತ್ತದೆ ಎಂದರೆ ಪಶ್ಚಿಮ ದಿಕ್ಕಿಗೆ ಬರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯು ಸದರಿ ಸರ್ವೆ ನಂ 341/1 ರ ಸ್ವತ್ತನ್ನು ಪ್ರತಿವಾದಿ 3 ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ 341/1 ರ ಸರ್ವೆ ದಾಖಲಾತಿಯನ್ನು ಪಡೆದುಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ 341/1 ರ ಸ್ವತ್ತನ್ನು ಸರ್ವೆ ಮಾಡಲು ಪ್ರತಿವಾದಿ 1 ರವರು ನನಗೂ ಸಹ ನೋಟಿಸ್ಸನ್ನು ನೀಡಿದ್ದರು ಎಂದರೆ ಸರಿಯಲ್ಲ. ಸರ್ವ ನಂ 341/2 ರಲ್ಲಿ ಮನೆಯನ್ನು ಕಟ್ಟಿದ್ದೇನೆಂದು ಹೇಳಿರುತ್ತೀರಿ ಯಾವಾಗ ಕಟ್ಟರುತ್ತೀರಿ ಎಂದರೆ 2007 ರಲ್ಲಿ ಕಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮನೆ ಕಟ್ಟಲು ಅನುಮತಿ ಪಡೆದಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಮುಂದುವರೆದು ಸದರಿ ಮನೆಗೆ ವಿಧ್ಯುತ್ ಸಂಪರ್ಕ ಮತ್ತು ಇ ಸ್ವತ್ತು ಸಹ ಅಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ 341/2 ನ್ನು ಭೂ ಪರಿವರ್ತನೆ ಮಾಡಿಸಿರುತ್ತಿರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ 341/1 ರಲ್ಲಿ ನಾನು 25 ಗುಂಟೆ ಸ್ವತ್ತನ್ನು ಒತ್ತುವರಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದ ಮನೆಯನ್ನು ಪ್ರತಿವಾದಿ 1 ರವರು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ದಾವಾ ಹೂಡಿದ ನಂತರ ನಾನು ಅತಿಕ್ರಮ ಪ್ರವೇಶ ಮಾಡಿ ಸದರಿ ಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಿ ದಾವಾ ಸ್ವತ್ತನ್ನು ಅಳತೆ ಮಾಡಲು ತೊಂದರೆ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿಗೆ ಸೇರಿದ ಜಮೀನನ್ನು ಒತ್ತುವರಿ ಮಾಡಿಕೊಂಡು ಸುಳ್ಳು ದಾವಾವನ್ನು ಹೂಡಿ

ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಪಿ 3 , 4 ಹಾಗೂ 6 ರಿಂದ 8 ದಾಖಲಾತಿಗಳನ್ನು ಈ ದಾವಾಗೊಸ್ಕರ ಸೃಷ್ಟಿಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯು ಅರೋಗ್ಯವಾಗಿದ್ದು ಓಡಾಡಿಕೊಂಡು ಇರುತ್ತಾರೆ ಎಂದರೆ ಸರಿಯಲ್ಲ. ಮುಂದುವರೆದು ವಾದಿಗೆ ಕಿವಿ ಕೇಳಿಸುವುದಿಲ್ಲ ಹಾಗೂ ಕಣ್ಣು ಕಾಣಿಸುವುದಿಲ್ಲವೆಂದು ನುಡಿಯುತ್ತಾರೆ ಅದಕ್ಕೆ ಸಂಬಂದಿಸಿದಂತೆ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ವಾದಿಯು ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ತಿಳಿಯುತ್ತದೆ ಎಂದು ನಾನು ಅಧಿಕಾರ ಪತ್ರ ಪಡೆದುಕೊಂಡು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)**

**ಓದಿ ಹೇಳಿ ಕೇಳಿ ಸರಿ ಇದೆ,**

**ಸಹಿ/-**

**(ಮಂಜು ಎಂ)**

**2 ನೇ ಅಪರ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್‌ಸಿ, ಕೆ.ಜಿ.ಎಫ್**